# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕೃಷಿ ಉತ್ಪನ್ನಗಳ ಗುಣವಿಶ್ಲೇಷಣೆ (ಅಸ್ಸೇಯಿಂಗ್) ಸೇವೆ - ರೈತ ಬಾಂಧವರ ಉತ್ಪನ್ನಕ್ಕೆ ಉಚಿತ ಗುಣವಿಶ್ಲೇಷಣೆ ಕೊಡುಗೆ

**ಮನೋಜ್ ರಾಜನ್**
ಬೆಂಗಳೂರು

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ಮಾರಾಟ ವ್ಯವಸ್ಥೆಯಲ್ಲಿ ಕೃಷಿ ಉತ್ಪನ್ನಗಳ ಗುಣವಿಶ್ಲೇಷಣೆ ಕಾರ್ಯವಿಧಾನ ಧಾರಣೆ ನಿರ್ಧರಣೆಯ ಮೇಲೆ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ಮಾರುಕಟ್ಟೆಯಲ್ಲಿ ಮಾರಾಟ ವ್ಯವಸ್ಥೆಯಲ್ಲಿ ಗುಣವಿಶ್ಲೇಷಣೆ ಮಾಡಿದ ಉತ್ಪನ್ನಕ್ಕೆ ಖರೀದಿದಾರರಿಂದ ಹೆಚ್ಚಿನ ಬೇಡಿಕೆ ವ್ಯಕ್ತವಾಗುತ್ತಿರುವುದನ್ನು ಮನಗಂಡು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಕೃಷಿ ಉತ್ಪನ್ನಗಳ ಗುಣವಿಶ್ಲೇಷಣೆಗಾಗಿ ಪ್ರಯೋಗಾಲಯಗಳನ್ನು ಸ್ಥಾಪಿಸಲು ಕೃಷಿ ಮಾರಾಟ ಇಲಾಖೆ ಮತ್ತು ರೆಮ್ಸ್ ಸಂಸ್ಥೆ ನಿರ್ಧರಿಸಿತು. ಜೊತೆಗೆ ರೈತ ಬಾಂಧವರ ಉತ್ಪನ್ನಗಳ ಗುಣ ವಿಶ್ಲೇಷಣೆ ಸೇವೆಯನ್ನು ಉಚಿತವಾಗಿ ಕಲ್ಪಿಸುವ ಮಹತ್ವದ ನಿರ್ಣಯವನ್ನು ಕೈಗೊಂಡು ಅನುಷ್ಠಾನ ಮಾಡಲಾಗಿದೆ.

**ಭೌತಿಕ ಗುಣವಿಶ್ಲೇಷಣೆಗೆ ವ್ಯಾಖ್ಯಾನ :**

ಕೃಷಿ ಉತ್ಪನ್ನಗಳ ಭೌತಿಕ ಮಾನದಂಡಗಳ ಅನ್ವಯ ಪರೀಕ್ಷಿಸಿ, ಉತ್ಪನ್ನದಲ್ಲಿನ ಕಸ-ಕಡ್ಡಿ, ತೇವಾಂಶ ಮತ್ತು ಉತ್ಪನ್ನದ ಒಟ್ಟಾರೆ ಗುಣಮಟ್ಟವನ್ನು ನುರಿತ ತಜ್ಞರಿಂದ ಕಂಡು ಹಿಡಿಯುವ ಕಾರ್ಯವಿಧಾನಕ್ಕೆ ಗುಣವಿಶ್ಲೇಷಣೆ ಎಂದು ಕರೆಯಲಾಗುತ್ತದೆ.

**ಉತ್ಪನ್ನಗಳ ಮಾದರಿ ತೆಗೆಯುವ ಕಾರ್ಯ ವಿಧಾನ :**

★ ರೈತರು ಏಕೀಕೃತ ಮಾರುಕಟ್ಟೆ ವೇದಿಕೆಗೆ ತರುವ ಉತ್ಪನ್ನಗಳ ಪ್ರತಿಶತ ಶೇಕಡ 10ರಷ್ಟು ಭಾಗಗಳಿಂದ ಮಾದರಿಯನ್ನು ತೆಗೆದು ಗುಣವಿಶ್ಲೇಷಣೆಗೆ ಉಪಯೋಗಿಸಲಾಗುತ್ತದೆ.

★ ಮಾರುಕಟ್ಟೆತಂದ ಉತ್ಪನ್ನವುಳ್ಳ ಚೀಲಗಳನ್ನು ರ್‍ಯಾಂಡಂ ರೀತಿಯಲ್ಲಿ ತೆಗೆದು, ಚೀಲಗಳಲ್ಲಿರುವ ಉತ್ಪನ್ನಗಳನ್ನು ಸುರಿದು, ರಾಶಿಯ ವಿವಿಧ ಭಾಗಗಳಿಂದ, ಅಂದರೆ ರಾಶಿಯ ಮುಂಭಾಗ, ಹಿಂಭಾಗ, ಎಡಭಾಗ, ಬಲಭಾಗ, ತುದಿ, ಮಧ್ಯ ಹಾಗೂ ತಳಭಾಗಗಳಿಂದ ಮಾದರಿಯನ್ನು ಸಂಗ್ರಹಿಸಲಾಗುತ್ತದೆ.

★ ಈ ರೀತಿ ಸಂಗ್ರಹಿಸಿದ ಮಾದರಿಯನ್ನು ಪ್ರಯೋಗಾಲಯದಲ್ಲಿ ಗುಣವಿಶ್ಲೇಷಣೆ ಮಾಡುವ ತಜ್ಞರು ಮಿಶ್ರಣ ಮಾಡಿ ದೊಡ್ಡ ಮಾದರಿಯನ್ನು ಸಿದ್ಧಪಡಿಸುತ್ತಾರೆ.

★ ಉತ್ಪನ್ನದ ಸಂಯುಕ್ತ ಮಾದರಿ **(Composite Sample)** ಸಿದ್ಧ ಮಾಡಲು ಮಾದರಿಯಿಂದ ಅಗತ್ಯ ವಿರುವ ಪ್ರಮಾಣದ ಉತ್ಪನ್ನ ತೆಗೆಯಲಾಗುತ್ತದೆ.

★ ಈ ರೀತಿ ಸಿದ್ಧಪಡಿಸಿದ ಸಂಯುಕ್ತ ಮಾದರಿಯ ಉತ್ಪನ್ನದಿಂದ ಸ್ಯಾಂಪಲ್ ಡಿವೈಡರ್ ಸಹಾಯದಿಂದ ಸಮನಾಗಿ ಬೇರ್ಪಡಿಸಿ, ಒಂದು ಭಾಗವನ್ನು ಭೌತಿಕ ಗುಣವಿಶ್ಲೇಷಣೆಗಾಗಿ ಉಪಯೋಗಿಸಲಾಗುತ್ತದೆ ಮತ್ತು ಉಳಿದ ಒಂದು ಭಾಗವನ್ನು ಪ್ರಯೋಗಾಲಯದಲ್ಲಿ **(Reference Sample)** ರೆಫರೆನ್ಸ್‌ಗಾಗಿ ಇಡಲಾಗುತ್ತದೆ.

★ ಪ್ರತಿ ಭಾಗವನ್ನು ಪ್ರತ್ಯೇಕವಾಗಿ ಪಾರದರ್ಶಕ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಪ್ಯಾಕ್ ಮಾಡಿ ಪ್ರತಿಯೊಂದು ಬ್ಯಾಗಿಗೆ ಗುರುತಿನ ಚೀಟಿಯನ್ನು ಲಗತ್ತಿಸಿ ಪ್ಯಾಕ್ ಮಾಡಿ ಸಂಗ್ರಹಿಸಲಾಗುವುದು.

★ ಉತ್ಪನ್ನದ ಮಾದರಿಯನ್ನು ಸಂಗ್ರಹಿಸಿದ ಸಂಪೂರ್ಣ ವಿವರಗಳನ್ನು ದಾಖಲು ಮಾಡಲು ರಜಿಸ್ಟರನ್ನು ನಿರ್ವಹಿಸಲಾಗುತ್ತಿದೆ.

**ಗುಣವಿಶ್ಲೇಷಣೆ ಕಾರ್ಯವಿಧಾನ :**

ಉತ್ಪನ್ನಗಳ ಮಾದರಿಗಳನ್ನು ಪರೀಕ್ಷಿಸಿದಾಗ ಯಾವುದೇ ಕ್ರಿಮಿಕೀಟಗಳ ಲಭ್ಯತೆ ಬಗ್ಗೆ ಪರೀಕ್ಷಿಸಲಾಗುತ್ತದೆ. ಒಂದು ವೇಳೆ ಜೀವವಿರುವ ಕ್ರಿಮಿಕೀಟಗಳು ಉತ್ಪನ್ನದಲ್ಲಿ ಪತ್ತೆಯಾದಲ್ಲಿ ಅಂತಹ ಲಾಟ್‌ಅನ್ನು ತಿರಸ್ಕರಿಸಲಾಗುವುದು ಹಾಗೂ ಉತ್ಪನ್ನದಲ್ಲಿ ಯಾವುದೇ ಕೃತಕ ರಾಸಾಯನಿಕ ಬಣ್ಣ ಅಥವಾ ಬೂಸ್ಟ್ ಹಿಡಿದ ಬಗ್ಗೆಯು ಕೂಡ ಪರೀಕ್ಷಿಸಲಾಗುತ್ತದೆ. ತದನಂತರ ಮಾದರಿಯನ್ನು ಗುಣಧರ್ಮಗಳ ವಿಶ್ಲೇಷಣೆಗಾಗಿ ಭೌತಿಕ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ

ರೀತಿಯಲ್ಲಿ ಉತ್ಪನ್ನಗಳ ಗುಣವಿಶ್ಲೇಷಣೆ ಮಾಡಿದ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆಯನ್ನು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಕಲ್ಪಿಸಲಾಗಿದೆ. ಈ ಕಾರ್ಯವಿಧಾನದಿಂದಾಗೀ ದೂರದ ಖರೀದಿದಾರರು ಉತ್ಪನ್ನಗಳ ಖರೀದಿ ಮಾಡಲು ಆನ್‌ಲೈನ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಒಟ್ಟಾರೆ ವಿಶ್ವಾಸಾರ್ಹ ಉತ್ಪನ್ನಗಳ ಗುಣವಿಶ್ಲೇಷಣೆ ಕ್ರಮದಿಂದಾಗಿ ಖರೀದಿ ಪ್ರಕ್ರಿಯೆಯಲ್ಲಿ ಸ್ಪರ್ಧೆ ಏರ್ಪಟ್ಟು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಮಾರಾಟವಾಗುವ ಉತ್ಪನ್ನಗಳಿಗೆ ನೈಜ ಬೆಲೆ ದೊರೆಯುವಂತಾಗಲಿದೆ.

**ಗುಣವಿಶ್ಲೇಷಣೆ ಮಾದರಿ ಪಟ್ಟಿ (Model Template) :**

ಏಕೀಕೃತ ಲೈಸೆನ್ಸ್ ಪಡೆದ ವರ್ತಕರು ಮತ್ತು ದಲ್ಲಾಲರಿಗೆ ನೀಡಿರುವ **User ID & password** ಮೂಲಕ ಏಕೀಕೃತ ಮಾರುಕಟ್ಟೆ ವೇದಿಕೆಯ ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು. ಒಮ್ಮೆ ವೆಬ್‌ಸೈಟ್ ಪ್ರವೇಶಿಸಿದ ಬಳಿಕ ವಿವಿಧ ಉತ್ಪನ್ನಗಳ ಗುಣಮಟ್ಟ ಗುಣಧರ್ಮ ಮತ್ತು ಗುಣ ವಿಶ್ಲೇಷಣೆಯ ವಿವರಗಳನ್ನು ಪಡೆಯಬಹುದು.

★ ಉತ್ಪನ್ನದ ಹೆಸರು
★ ಮಾರುಕಟ್ಟೆ ಆವಕ ಮತ್ತು ಮಾರುಕಟ್ಟೆ ಹೆಸರು
★ ಮಾದರಿ ತೆಗೆದ ದಿನಾಂಕ
★ ರೈತರ ಹೆಸರು
★ ಉತ್ಪನ್ನದ ಹೆಸರು ಮತ್ತು ಲಾಟ್ ನಂಬರ
★ ಮೇಲ್ವಿಚಾರಕರ ಹೆಸರು
★ ಉತ್ಪನ್ನದ ಗುಣವಿಶ್ಲೇಷಣೆಯ ವಿವರಗಳು ಆನ್‌ಲೈನ್‌ನಲ್ಲಿ ಖರೀದಿದಾರರಿಗೆ ಲಭ್ಯವಾಗಲಿದೆ.

**ಗುಣವಿಶ್ಲೇಷಣಾ ಕೇಂದ್ರಗಳು :**

ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ಸಂಸ್ಥೆಯು ರಾಜ್ಯ ಕೃಷಿ ಮಾರಾಟ ಇಲಾಖೆಯ ಸಹಯೋಗದೊಂದಿಗೆ ಪ್ರಾರಂಭಿಕವಾಗಿ ಹುಬ್ಬಳ್ಳಿ, ಗದಗ, ಮುಂಡರಗಿ, ಬಳ್ಳಾರಿ, ಚಿತ್ರದುರ್ಗ, ತಿಪಟೂರು, ಕೊಪ್ಪಳ, ರೋಣ, ಲಕ್ಷ್ಮೇಶ್ವರ ಸೇರಿದಂತೆ 10 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವೈಜ್ಞಾನಿಕ ಗುಣವಿಶ್ಲೇಷಣೆ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಈ ಕೇಂದ್ರಗಳಲ್ಲಿ ರೈತರು ಕೃಷಿ ಉತ್ಪನ್ನಗಳ ಗುಣವಿಶ್ಲೇಷಣೆ ಸೇವೆಯನ್ನು ಉಚಿತವಾಗಿ ಪಡೆಯಲು ಅನುಕೂಲ ಕಲ್ಪಿಸಲಾಗಿದೆ.

ಎರಡನೇ ಹಂತದಲ್ಲಿ ಬಾಗಲಕೋಟಿ, ಭದ್ರಾವತಿ, ಭೀಮಸಮುದ್ರ, ಬೀದರ್, ಬಿರೂರ್, ಚಳ್ಳಕೆರೆ, ಚನ್ನಗಿರಿ, ದಾವಣಗೆರೆ, ಧಾರವಾಡ, ಗುಬ್ಬಿ, ಹರಪ್ಪನಹಳ್ಳಿ, ಹಿರಿಯೂರು, ಹೊಸದುರ್ಗ, ಹೊಸನಗರ, ಹುಳಿಯಾರ್, ಕಡೂರ್, ಕೊಟ್ಟೂರ್, ಮೈಸೂರು, ರಾಯಚೂರು, ರಾಮದುರ್ಗ, ಸಾಗರ, ಶಿವಮೊಗ್ಗ, ಸಿದ್ದಾಪುರ, ಸಿರಾ, ಸಿರ್ಸಿ, ತೀರ್ಥಹಳ್ಳಿ, ತುಮಕೂರು, ಯಾದಗಿರಿ, ಯಲ್ಲಾಪುರ, ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

**ಗುಣವಿಶ್ಲೇಷಣೆ ನಿರ್ಧರಣೆ ಮತ್ತು ಗುಣವಿಶ್ಲೇಷಣೆಯಿಂದಾಗುವ ಲಾಭಗಳು :**

ಕೃಷಿ ಉತ್ಪನ್ನಗಳ ಗುಣವಿಶ್ಲೇಷಣೆಯಲ್ಲಿ ಪರಿಣಿತಿ ಹೊಂದಿರುವ ಎನ್‌ಸಿಎಂಎಲ್ ಸಂಸ್ಥೆಯೊಂದಿಗೆ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ಸಂಸ್ಥೆಯ ನಡುವಿನ ಒಪ್ಪಂದದಂತೆ, ಸಂಸ್ಥೆಯ ನುರಿತ ಗುಣವಿಶ್ಲೇಷಣ ತಜ್ಞರು ರೈತರ ಕೋರಿಕೆ ಮೇರೆಗೆ ಅವರು ಮಾರಾಟಕ್ಕೆ ತಂದ ಉತ್ಪನ್ನಗಳ ಲಾಟ್‌ಗಳಿಂದ ಮಾದರಿಗಳನ್ನು ತೆಗೆದು ಉತ್ಪನ್ನದ ಗುಣಧರ್ಮಗಳನ್ನು ಪರೀಕ್ಷಿಸುತ್ತಾರೆ. ಬಳಿಕ ನಿಗದಿತ ನಮೂನೆಯಲ್ಲಿ ಗುಣವಿಶ್ಲೇಷಣೆಯಿಂದ ಬರುವ ಉತ್ಪನ್ನದಲ್ಲಿನ ದತ್ತಾಂಶಗಳನ್ನು ದಾಖಲು ಮಾಡಿ, ರೈತರಿಗೆ ಗುಣವಿಶ್ಲೇಷಣೆಯ ಗಣಕೀಕೃತ ಪ್ರಮಾಣ ಪತ್ರವನ್ನು ನೀಡುತ್ತಾರೆ. ಈ ಪ್ರಮಾಣ ಪತ್ರವನ್ನು ರೈತರು ತಮ್ಮ ಉತ್ಪನ್ನದ ಲಾಟ್ ಮುಂದೆ ಪ್ರದರ್ಶಿಸಬಹುದು. ಜೊತೆಗೆ ಇದೇ ಮಾಹಿತಿಯನ್ನು ಏಕೀಕೃತ ಮಾರುಕಟ್ಟೆ ವೇದಿಕೆಯ ಆನ್‌ಲೈನ್‌ನಲ್ಲಿ ಕೂಡ ಪ್ರಸಾರ ಮಾಡಲಾಗುವುದು.

ಈ ವ್ಯವಸ್ಥೆಯಿಂದ ಸ್ಥಳೀಯ ಮಾರುಕಟ್ಟೆ, ರಾಜ್ಯದ ಹೊರ ಮಾರುಕಟ್ಟೆ ಮತ್ತು ಹೊರರಾಜ್ಯದ ವರ್ತಕರು ಹಾಗೂ ದಲ್ಲಾಲರು ಅಗತ್ಯ ಉತ್ಪನ್ನಗಳ ಖರೀದಿಗೂ ಮುನ್ನಾ ಅವುಗಳ ಗುಣಧರ್ಮ ಮತ್ತು ಗುಣವಿಶ್ಲೇಷಣೆಯ ಮಾಹಿತಿಯನ್ನು ಪರಿಶೀಲಿಸಿ, ಆನ್‌ಲೈನ್ ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ. ಇದೊಂದು ಪಾರದರ್ಶಕತೆ ವ್ಯವಸ್ಥೆಯಾಗಿದ್ದು, ಇ-ಟೆಂಡರ್‌ನಲ್ಲಿ ಉತ್ಪನ್ನಗಳ ಖರೀದಿಗೆ ಖರೀದಿದಾರರಿಂದ ಸ್ಪರ್ಧೆ ಹೆಚ್ಚಾಗಿ, ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಲಭ್ಯವಾಗಲಿದೆ. ಮಾರುಕಟ್ಟೆಯಲ್ಲಿ ಉತ್ಪನ್ನದ ಗುಣಧರ್ಮ ಮತ್ತು ಗುಣವಿಶ್ಲೇಷಣೆ ಮಾಡಿಸಿ ಮಾರಾಟ ಮಾಡುವುದರಿಂದ ಕೃಷಿ ಉತ್ಪನ್ನಗಳಿಗೆ ಸ್ಪರ್ಧೆ ಹೆಚ್ಚಿ

ರೈತರು ನಿರೀಕ್ಷಿಸಿದ ಬೆಲೆ ಅವರ ಉತ್ಪನ್ನಗಳಿಗೆ ದೊರೆಯುತ್ತದೆ. ಇದು ರೈತ ಬಾಂಧವರಿಗೆ ಅತ್ಯಂತ ಉಪಯುಕ್ತ ಹಾಗೂ ಲಾಭದಾಯಕ ವ್ಯವಸ್ಥೆಯಾಗಿ ಹೊರ ಹೊಮ್ಮಿದೆ.

**ವರ್ತಕರಿಗೆ ಆಗುವ ಅನುಕೂಲಗಳು :**

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವಿವಿಧ ಕೃಷಿ ಉತ್ಪನ್ನಗಳ ಲಾಟ್‌ಗಳನ್ನು ಸ್ಥಳೀಯ ಖರೀದಿದಾರರು ಖುದ್ದು ಪರಿಶೀಲಿಸಲು ಅವಕಾಶವಿದೆ. ಆದರೆ ಉತ್ಪನ್ನದ ವೈಜ್ಞಾನಿಕವಾದ ಗುಣವಿಶ್ಲೇಷಣೆ ಮಾಹಿತಿಯನ್ನು ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಬೇಕಾದ ಉತ್ಪನ್ನಗಳ ಲಾಟ್‌ಗಳಿಗೆ ಭೇಟಿ ನೀಡಿ ಪರೀಕ್ಷಿಸುವುದರಿಂದ ಸಮಯ ವ್ಯರ್ಥವಾಗಲಿದೆ. ವರ್ತಕರು ಆನ್‌ಲೈನ್‌ನಲ್ಲೇ ಉತ್ಪನ್ನಗಳ ಆವಕ ಮತ್ತು ಗುಣವಿಶ್ಲೇಷಣೆ ಮಾಹಿತಿಯನ್ನು ಪರಿಶೀಲಿಸಿ ಇ-ಟೆಂಡರ್‌ನಲ್ಲಿ ಭಾಗವಹಿಸಲು ಅನುಕೂಲವಾಗಿದೆ. ಖರೀದಿದಾರರು ಮತ್ತು ದಲ್ಲಾಲರು, ಸ್ಥಳೀಯರು ಅಥವಾ ರಾಜ್ಯದವರು ರಾಜ್ಯದ ಯಾವುದೇ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿನ ಉತ್ಪನ್ನಗಳ ಖರೀದಿಸಲು ಇದೊಂದು ವಿಶ್ವಾಸ ಅರ್ಹ ವರ್ತಕ ಸ್ನೇಹಿ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಿಂದಾಗಿ ವರ್ತಕರು ಉತ್ಪನ್ನಗಳ ಖರೀದಿಗಾಗಿ ಒಂದು ಮಾರುಕಟ್ಟೆಯಿಂದ ಮತ್ತೊಂದು ಮಾರುಕಟ್ಟೆಗೆ ಸಂಚಾರ ಮಾಡುವ ಅಗತ್ಯವಿಲ್ಲ. ಅವರು ಈ ಸ್ಥಳದಿಂದಲೇ ಅಗತ್ಯ ಉತ್ಪನ್ನಗಳಿಗೆ ಆನ್‌ಲೈನ್ ಟೆಂಡರ್‌ನಲ್ಲಿ ಬಿಡ್ ಮಾಡಬಹುದಾಗಿದೆ.

**ಉತ್ಪನ್ನದ ಗುಣವಿಶ್ಲೇಷಣೆಯಲ್ಲಿ ನ್ಯೂನತೆ ಏರ್ಪಟ್ಟರೆ ಅಥವಾ ವಿವಾದಗಳ ಇತ್ಯರ್ಥಪಡಿಸಲು ಅನುಸರಿಸಬೇಕಾದ ವಿಧಾನ :**

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಉತ್ಪನ್ನದ ಗುಣ ವಿಶ್ಲೇಷಣೆ ಪ್ರಯೋಗಾಲಯದಲ್ಲಿ ಗುಣವಿಶ್ಲೇಷಣೆ ಮಾಡಿಸಿದ ಉತ್ಪನ್ನಗಳಲ್ಲಿ ಅಸಮರ್ಪಕ ಮಾಹಿತಿ ಅಥವಾ ನ್ಯೂನತೆ ಕಂಡು ಬಂದರೆ ಅದನ್ನು ಇತ್ಯರ್ಥಪಡಿಸಲು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ & ಅಭಿವೃದ್ಧಿ) ನಿಯಮಗಳು 1968ರ ನಿಯಮ 91-**O** ಹಾಗೂ 91-**P** ರನ್ವಯ ಕ್ರಮ ವಹಿಸುವುದು.

ಮಾರುಕಟ್ಟೆಯಲ್ಲಿ ಮಾರಾಟಕ್ಕಿಟ್ಟ ಉತ್ಪನ್ನಗಳ ಗುಣ ವಿಶ್ಲೇಷಣೆಗಾಗಿ ಮಾದರಿ ತೆಗೆಯುವಿಕೆಯಲ್ಲಿ ಅಥವಾ ಪರೀಕ್ಷೆಯ ದತ್ತಾಂಶ ವಿವರದಲ್ಲಿ ವಿವಾದವಿದ್ದರೆ, ಕೂಡಲೇ ರೈತರು ಅಥವಾ ಖರೀದಿದಾರರು ಸಂಬಂಧಪಟ್ಟ ಮಾರುಕಟ್ಟೆಯ ಕಾರ್ಯದರ್ಶಿ ಅವರ ಗಮನಕ್ಕೆ ತರುವುದು.

ಮಾರುಕಟ್ಟೆ ಕಾರ್ಯದರ್ಶಿ ಅವರು ದೂರುದಾರರ ಲಾಟ್‌ಗೆ ಭೇಟಿ ನೀಡಿ, ಉತ್ಪನ್ನದ ಮರು ಮಾದರಿಯನ್ನು ಸಂಗ್ರಹಿಸಿ ಮತ್ತೊಮ್ಮೆ ಗುಣವಿಶ್ಲೇಷಣೆ ಮಾಡಿಸುವ ಕ್ರಮಗಳನ್ನು ಜರುಗಿಸಲಿದ್ದಾರೆ.

ಮಾರುಕಟ್ಟೆಯಲ್ಲಿ ಗುಣವಿಶ್ಲೇಷಣೆ ಮಾಡಿದ ಉತ್ಪನ್ನ ಮಾರಾಟವಾದ ಬಳಿಕ ಅದೇ ಉತ್ಪನ್ನದ ಗುಣಮಟ್ಟ ಮತ್ತು ಗುಣವಿಶ್ಲೇಷಣೆ ಬಗ್ಗೆ ಅನುಮಾನವಿದ್ದಲ್ಲಿ ಟೆಂಡರ್ ಡಿಕ್ಲೇರ್ ಮಾಡಿದ ಎರಡು ಗಂಟೆಯೊಳಗೆ ಟೆಂಡರ್ ವಿಜೇತರು ಮಾರುಕಟ್ಟೆಯ ಕಾರ್ಯದರ್ಶಿ ಅವರ ಗಮನಕ್ಕೆ ತರಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿಯ ಸಮಸ್ಯೆಗಳನ್ನು ಕೂಡಲೇ ಇತ್ಯರ್ಥ ಪಡಿಸುವ ಅಧಿಕಾರವನ್ನು ಕಾರ್ಯದರ್ಶಿ ಅವರು ಹೊಂದಿರುತ್ತಾರೆ.

ಒಂದು ವೇಳೆ ಕಾರ್ಯದರ್ಶಿ ಅವರು ಸಮಸ್ಯೆಗಳನ್ನು ಇತ್ಯರ್ಥ ಪಡಿಸಿದ ಮಾರ್ಗಗಳಿಗೆ ರೈತರು ಅಥವಾ ಖರೀದಿದಾರ ಒಪ್ಪಿಗೆ ಇಲ್ಲವಾದಲ್ಲಿ, ವಿವಾದ ಇತ್ಯರ್ಥ ಮಾಡಿಕೊಳ್ಳಲು ಮಾರುಕಟ್ಟೆ ಸಮಿತಿಯಲ್ಲಿನ ''ಡಿಸ್ಪ್ಯೂಟ್ ರೆಸಲ್ಯೂಷನ್ ಕಮಿಟಿ'' ಗಮನಕ್ಕೆ ತರಲು ಅವಕಾಶ ನೀಡಲಾಗಿದೆ.

**ರೈತ ಬಾಂಧವರಿಗೆ ಮಾರ್ಗಸೂಚಿ :**

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಲಭ್ಯವಿರುವ ಕೃಷಿಕಾರ ಉತ್ಪನ್ನಗಳಿಗೆ ಉಚಿತ ಗುಣವಿಶ್ಲೇಷಣೆ ಸೇವೆ ಸೌಲಭ್ಯ ಪಡೆಯಲು ರೈತರು ಬೆಳೆಯನ್ನು ಸರಿಯಾದ ಸಮಯದಲ್ಲಿ ಕೊಯ್ಲು ಮಾಡಿ, ಒಣಗಿಸಿ, ಕಸಕಡ್ಡಿಯನ್ನು ಬೇರ್ಪಡಿಸಿ, ಗಾತ್ರ ಮತ್ತು ಗುಣಮಟ್ಟಕ್ಕೆ ಅನುಗುಣವಾಗಿ ವರ್ಗೀಕರಿಸಿ ಮಾರುಕಟ್ಟೆಗೆ ತರುವುದು. ಮಾರುಕಟ್ಟೆಗೆ ತಂದ ಉತ್ಪನ್ನವನ್ನು ತಪ್ಪದೇ ಗುಣವಿಶ್ಲೇಷಣೆ ಮಾಡಿಸಿ, ತಮ್ಮ ಬೆಳೆಗೆ ನೈಜ ಬೆಲೆ ಪಡೆಯಬೇಕು ಎಂಬುದೇ ರೆಮ್ಸ್ ಸಂಸ್ಥೆಯ ಆಶಯ.

**ಮುಂದಿನ ಸಂಚಿಕೆಗಳಲ್ಲಿ :**

ಅರಿಷಿಣ, ಕೊಬ್ಬರಿ, ಶೇಂಗಾ, ಹತ್ತಿ ಮತ್ತು ಬೆಳೆಕಾಳುಗಳು ಸೇರಿದಂತೆ ಇತರೆ ಪ್ರಮುಖ ಉತ್ಪನ್ನಗಳ ಕುರಿತು ಗುಣವಿಶ್ಲೇಷಣೆಯ ಕಾರ್ಯವಿಧಾನ ಹಾಗೂ ಉತ್ಪನ್ನದಲ್ಲಿ ಯಾವೆಲ್ಲ ಅಂಶಗಳು ಇದ್ದರೆ ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಖರೀದಿದಾರರಿಂದ ಉತ್ಪನ್ನಗಳ ಖರೀದಿಗೆ ಬೇಡಿಕೆ ಹೆಚ್ಚಲಿದೆ. ಈ ಕ್ರಮಗಳಿಂದಾಗಿ ಉತ್ಪನ್ನಗಳ ಬೆಲೆ ನಿರ್ಧಾರಣೆಯ ಮೇಲೆ ಯಾವ ರೀತಿ ಸ್ಪರ್ಧೆ ಏರ್ಪಡಲಿದೆ ಎಂಬುದರ ಕುರಿತು ಲೇಖನಗಳು ಪ್ರಕಟಗೊಳ್ಳಲಿವೆ ಎಂಬುದನ್ನು ನಮ್ಮ ಆತ್ಮೀಯ ಕೃಷಿಪೇಟೆ ಮಾಸಪತ್ರಿಕೆಯ ಓದುಗರ ಗಮನಕ್ಕೆ ತರಲು ಇಚ್ಛಿಸುತ್ತೇವೆ. ★